ನೋಡಿ ನನಗೆ ಸಂತೋಷವಾಗುತ್ತದೆ. ನನ್ನ ಮಗನೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ. ಆದರೆ ಅಷ್ಟರಲ್ಲೇ ದುಃಖವಾಗುತ್ತದೆ.

ತೆಲುಗು ಬರುವುದಿಲ್ಲವೆಂದು ಅವಮಾನ ಮಾಡುತ್ತಾರೆಂದು ಪುಟ್ಟನನ್ನು ನಾನು ತೆಲುಗು ಶಾಲೆಗೆ ಕಳಿಸಲು ಸಿದ್ಧವಾದರೆ, ನನಗೆ ಅವಮಾನ ಮಾಡಿದವರೆಲ್ಲಾ ತಮ್ಮ ಮಕ್ಕಳನ್ನು ಇಂಗ್ಲಿಷ್ ಶಾಲೆಗೆ ಕಳಿಸಿ ನಂತರ ಅಮೆರಿಕಾಗೆ ಕಳಿಸುತ್ತಾರೆ. ಮಾತೃಭಾಷೆಯನ್ನು ತಪ್ಪಿಲ್ಲದೆ ಮಾತನಾಡುವುದನ್ನು ಈಗಲೇ ಕಲಿಸುತ್ತಿದ್ದೇನೆಂದು ನಾನು ಸಂತೋಷಪಡುತ್ತಿದ್ದರೆ, ಅವನಿಗೆ ಇಂಗ್ಲಿಷ್ ಸರಿಯಾಗಿ ಬರುವುದಿಲ್ಲವೆಂದು ಅವರೇ ಅವಮಾನ ಮಾಡುತ್ತಿದ್ದಾರೆ. ಈ ವೈರುಧ್ಯಕ್ಕೆ ನನಗೆ ಬೇಸರವಾಗುತ್ತದೆ.

ಆದರೆ ನನಗೆ ಎಷ್ಟೇ ಅಭಿಮಾನವಿದ್ದರೂ ನನಗ್ಯಾಕೋ ಈ ಬಾಪು ಪುಸ್ತಕವನ್ನು ಮಾತ್ರ ಕೊಳ್ಳಲು ಮನಸ್ಸು ಬರಲಿಲ್ಲ. ತಲೆಯಲ್ಲಿ ಬಗೆಬಗೆಯ ಯೋಚನೆಗಳು ಸುಳಿಯಲು ಶುರುವಾದವು. ಆ ಪುಸ್ತಕವನ್ನು ಅಲ್ಲಿಯೇ ಬಿಟ್ಟು ಹೊರ ಬಂದೆ. ಮನೆಗೆ ಬಂದು ವಿಷಯವನ್ನು ನನ್ನವಳಿಗೆ ಹೇಳಿದೆ.

'ಅ ಅಂದರೆ ಅದರ ಅರ್ಥ ಅಮ್ಮ ತಾನೆ? ಅ ಅಕ್ಷರಕ್ಕೂ ಅಮ್ಮನ ಮಾತಿಗೂ ಎಷ್ಟೊಂದು ಹತ್ತಿರದ ಸಂಬಂಧವಿದೆ. ಅದನ್ನು ಇದ್ದಕ್ಕಿಂತೆ ಕತ್ತರಿಸಿಬಿಟ್ಟರೆ ಹೇಗೆ? ಚೆಂದನೆಯ ಅಮ್ಮನ ಚಿತ್ರದ ಬದಲಾಗಿ ಅರಸನ ಚಿತ್ರ ಹಾಕಿದ್ದಾರೆ' ಎಂದೆ ದುಃಖದಿಂದ.

ನನ್ನಾಕೆ ನನ್ನ ನೋವನ್ನು ಅರ್ಥಮಾಡಿಕೊಂಡಳು.

'ನಾನು ಚಿಕ್ಕವಳಿದ್ದಾಗ ನನಗೂ ಅಮ್ಮನ ಚಿತ್ರವೆಂದರೆ ತುಂಬಾ ಇಷ್ಟ. ಆದರೆ ನಮ್ಮಮ್ಮ ಯಾವಾತ್ತೂ ನನ್ನನ್ನು ಆ ರೀತಿ ಎತ್ತಿಕೊಂಡು ಆಕಾಶ ತೋರಿಸುತ್ತಾ, ತುತ್ತು ಉಣ್ಣಿಸಲೇ ಇಲ್ಲ' ಎಂದಳು.

ನಾನು ಜೋರಾಗಿ ನಕ್ಕು, 'ಖಂಡಿತಾ ತಿನ್ನಿಸಿರ್ತಾಳೆ. ನೀನು ಚಿಕ್ಕವಳಿರಬಹುದು. ನೆನಪು ಇರಲಿಕ್ಕಿಲ್ಲ' ಎಂದೆ.

'ಹೌದೌದು ಸುಮ್ಮನೆ ಅಂದೆ. ಈಗ ನಾನು ತಿನಿಸ್ತಾ ಇಲ್ವಾ ನನ್ನ ಮಗನಿಗೆ' ಎಂದಳು ಮತ್ತೆ.

ಹೌದು ಚಿಕ್ಕಮಕ್ಕಳಿಗೆ ತುತ್ತು ಉಣಿಸೋದು ದೊಡ್ಡ ಕಲೆ. ಕಲೆ ಮಾತ್ರ ಅಲ್ಲ, ಅದೊಂದು ಸವಾಲ್. ಅನ್ನದ ತಾಟು ಎದುರಿಗಿಟ್ಟುಕೊಂಡು ತಲೆ ಕೆಳಗಾಗಿ ತಪಸ್ಸು ಮಾಡಬೇಕು. ಆಗ ಅವರು ಒಂದು ತುತ್ತನ್ನು ಬಾಯಲ್ಲಿಟ್ಟುಕೊಳ್ಳುತ್ತಾರೆ. ಈ ಕೆಲಸಕ್ಕೆ ನಾನು ಕೂಡಾ ಆಗಾಗ ಸ್ಪರ್ಧೆಗಿಳಿಯುತ್ತಿರುತ್ತೇನೆ. ಅವನು ಹಟ ಮಾಡುತ್ತಿರುತ್ತಾನೆ. ನನ್ನಲ್ಲಿ ತಾಳ್ಮೆ ಕಳೆದು ಹಟ ಜಾಸ್ತಿಯಾಗುತ್ತದೆ. ಬಲವಂತದಿಂದ ಒಂದು ಕೈಯಿಂದ ಬಾಯಿ ತೆರೆದು ಮತ್ತೊಂದು ಕೈಯಿಂದ ಅನ್ನದ ತುತ್ತನ್ನು ತುರುಕುತ್ತೇನೆ. ಚೋಟುದ್ದ ಇಲ್ಲದ ಈ ಪುಟ್ಟನಿಗೆ ಎಷ್ಟೊಂದು ಪೊಗರು?

'ಬಲವಂತದಿಂದ ಊಟ ಮಾಡಿಸ್ತೀಯ' ಎಂದು ಕೆಕ್ಕರಿಸಿ ನೋಡುತ್ತಾ ತನ್ನ ಬಾಯಿಯಲ್ಲಿರುವುದೆಲ್ಲಾ ನನ್ನ ಮುಖದ ಮೇಲೆ 'ಥೂ' ಎಂದು ಉಗಿದು ಬಿಡುತ್ತಾನೆ. ನನ್ನ ಸಿಟ್ಟು ತಾರಕಕ್ಕೇರಿ ಒಂದು ಏಟು ಹಾಕುತ್ತೇನೆ. ಅಷ್ಟರಲ್ಲಿ ಅವನಮ್ಮ ಓಡಿ ಬರುತ್ತಾಳೆ. 'ಮಗುವಿಗೆ ಊಟ ಮಾಡಿಸೋದು ಕಥೆ ಬರೆದಷ್ಟು ಸುಲಭವಲ್ಲ' ಎಂದು ನನಗೆ ಕ್ಲಾಸ್ ತಗೋತಾಳೆ.

ಇದೆಲ್ಲಾ ನೆನಪಿಗೆ ಬಂತು.

'ಸರಿ ಬಿಡು. ಚಿಕ್ಕವಳಿದ್ದಾಗ ನೀನು ಓದಿರೋ ತೆಲುಗು ಪುಸ್ತಕದಲ್ಲಿ ಅಮ್ಮನ ಚಿತ್ರ ಹೇಗಿತ್ತು?' ಎಂದು ಕೇಳಿದೆ.